ವೃಷಭಾವತಿ ನದಿಯ ಏತ ನೀರಾವರಿ ಯೋಜನೆ

166 : (218)

ಶ್ರೀ ರಾಜು ಕೆ. (ರಾಮನಗರ)

ಅ) ರಾಮನಗರ ತಾಲ್ಲೂಕಿನ ಕೈಲಾಂಚ ಹೋಬಳಿ, ಹುಚ್ಚಮ್ಮನ-ದೊಡ್ಡಿ ಗ್ರಾಮದಲ್ಲಿ ವೃಷಭಾವತಿ ನದಿಯ ಏತ ನೀರಾವರಿ ಯೋಜನೆಯನ್ನು ಸ್ಥಗಿತಗೊಳಿಸಲು ಕಾರಣಗಳೇನು?

ಆ) ಈ ರೀತಿ ಸ್ಥಗಿತಗೊಳಿಸಿರುವುದರಿಂದ ಆ ಭಾಗದ ರೈತರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಪುನಃ ಏತ ನೀರಾವರಿ ಯನ್ನು ಪ್ರಾರಂಭಿಸಲಾಗು-ವುದೇ? (ಮಾಹಿತಿ ನೀಡುವುದು)

ಶ್ರೀ ಗೋವಿಂದ ಎಂ. ಕಾರಜೋಳ

(ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.)

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ ರಾಮನಗರ ತಾಲ್ಲೂಕು ಕೈಲಾಂಚ ಹೋಬಳಿ ಹುಚ್ಚಮ್ಮನದೊಡ್ಡಿ ಬಳಿ 1983ರಲ್ಲಿ ಏತ ನೀರಾವರಿ ಯೋಜನೆಯನ್ನು, ವೃಷಭಾವತಿ ನದಿಗೆ ಅಳವಡಿಸಿ ಪ್ರಾರಂಭಿಸಲಾಗಿತ್ತು. ಈ ಯೋಜನೆಯಿಂದ ಒಟ್ಟು 280 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿತ್ತು. ಸದರಿ ಯೋಜನೆಯನ್ನು ಪುನಃ ಸುಸ್ಥಿತಿಗೆ ತರಲು 2004-05ರಲ್ಲಿ 11ನೇ ಹಣಕಾಸು ಯೋಜನೆಯ ನಿಷ್ಕ್ರಿಯಗೊಂಡ ಹಾಗೂ ರೋಗಗ್ರಸ್ತ ಏತ ನೀರಾವರಿ ಯೋಜನೆಗಳ ಪುನಶ್ಚೇತನ ಯೋಜನೆ ಅಡಿಯಲ್ಲಿ 29.95 ಲಕ್ಷ ರೂಗಳಿಗೆ ಅನುಮೋದನೆ ನೀಡಲಾಗಿತ್ತು. ಸದರಿ 29.95 ಲಕ್ಷ ರೂಗಳ ಕಾಮಗಾರಿಯನ್ನು ಸಿವಿಲ್ ಹಾಗೂ ಎಲೆಕ್ಟ್ರಿಕಲ್ ಭಾಗಗಳಾಗಿ ವಿಂಗಡಿಸಿ, 12.80 ಲಕ್ಷ ರೂ.ಗಳ ಬ್ಯಾರೇಜು ಮುಂತಾದ ಸಿವಿಲ್ ಕಾಮಗಾರಿಗಳನ್ನು 10.79 ಲಕ್ಷ ರೂ.ಗಳಿಗೂ ಹಾಗೂ 16.69 ಲಕ್ಷ ರೂ.ಗಳ ಪಂಪು, ಮೋಟಾರ್ ಮತ್ತು ವಿದ್ಯುತ್‌ಕರಣ ಕಾಮಗಾರಿಗಳನ್ನು 18.24 ಲಕ್ಷ ರೂ.ಗಳಿಗೆ ವಹಿಸಲಾಗಿತ್ತು. ಆದಾಗ್ಯೂ ಸಹ ಕಾಲಕ್ರಮೇಣ ನದಿಯ ತಳಮಟ್ಟವು ಕುಸಿದು, ನದಿಯಿಂದ ನೀರು ಇನ್‌ಟೇಕ್ ಬಾವಿಗೆ

ಬರದೆ ಇರುವ ಕಾರಣದಿಂದ ಹಾಗೂ ವಿದ್ಯುತ್ ಮೋಟಾರುಗಳು ತಮ್ಮ ವಿನ್ಯಾಸಿತ ಸಾಮರ್ಥ್ಯವನ್ನು ಕಳೆದುಕೊಂಡು ನಿಗದಿತ ಪ್ರಮಾಣದ ನೀರನ್ನು ಹೊರದಬ್ಬಲು ಅಶಕ್ತವಾಗಿರುವ ಕಾರಣದಿಂದ ಸದರಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಆ) ಬಂದಿದೆ

ಇ) ಮತ್ತೊಮ್ಮೆ ಸದರಿ ಯೋಜನೆಯನ್ನು ಪುನಃಶ್ಚೇತನಗೊಳಿಸಲು 2006–07 ರಲ್ಲಿ ಲೆಕ್ಕಶೀರ್ಷಿಕೆ 4702–00–101–03–01 ಏತ ನೀರಾವರಿ ಯೋಚನೆ ಅಡಿಯಲ್ಲಿ ರೂ. 1.25 ಕೋಟಿಗೆ ದಿ:30.03.2007ರಲ್ಲಿ ಮಂಜೂರು ಪಡೆದುಕೊಳ್ಳಲಾಗಿದ್ದು, ಈ ಕಾಮಗಾರಿಗೆ 5 ಬಾರಿ ಟೆಂಡರ್ ಕರೆಯಲಾಗಿದ್ದರೂ ಸಹ ಯಾರೊಬ್ಬ ಗುತ್ತಿಗೆದಾರರು ನಿಗದಿತ ಟೆಂಡರ್ ಅರ್ಹತೆಯನ್ನು ಹೊಂದಿಲ್ಲದಿದ್ದ ಕಾರಣ ಟೆಂಡರ್ ಅನುಮೋದನೆ ಗೊಂಡಿರುವುದಿಲ್ಲ.

ಸದರಿ ನೀರಾವರಿ ಯೋಜನೆಯನ್ನು ಪುನರ್ ನಿರ್ಮಾಣ ಮಾಡಲು ಜನಪ್ರತಿನಿಧಿಗಳ ಕೋರಿಕೆಯಂತೆ, ಬರುವ ಸಾಲಿನಲ್ಲಿ ರೂ: 350.00 ಲಕ್ಷಗಳಿಗೆ ಕಾಮಗಾರಿ ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುತ್ತಿದೆ.

ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಅಭಾವ

115 : (271)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳು ವಿದ್ಯುತ್ ಅಭಾವದಿಂದ ಮತ್ತು ಮೂಲಭೂತ ಸೌಕರ್ಯಗಳ ಕೊರತೆಯಿಂದ ಮುಚ್ಚುವ ಹಂತಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ನಷ್ಟದಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ಸರ್ಕಾರವು ಯಾವ ರೀತಿ ಪ್ರೋತ್ಸಾಹ ನೀಡುತ್ತಿದೆ (ವಿವರ ನೀಡುವುದು)?